ಶಿಕ್ಷಕ ವೃತ್ತಿ ನಿರ್ವಹಿಸಿ ನಿವೃತ್ತರಾಗಿರುವ ತಮ್ಮಣ್ಣ ಬೀಗಾರ್ ಸಿದ್ಧಾಪುರ ನಿವಾಸಿ. ಮಕ್ಕಳಿಗಾಗಿ ಕವನ, ಕಥೆ, ಕಾದಂಬರಿ, ಲಲಿತ ಬರಹ, ಬಾಲ್ಯದ ನೆನಪಿನ ಲಹರಿ, ಶಿಶು ಪ್ರಾಸ, ಚಿತ್ರ ಪುಸ್ತಕ ಮುಂತಾದ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದ್ದಾರೆ. 'ಬಾವಲಿ ಗುಹೆ' ಮಕ್ಕಳ ಕಾದಂಬರಿಗೆ 2022ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರ ಬಂದಿದೆ.

ಸಂತಸದಲ್ಲಿ ತೇಲುತ್ತಾ ಹೆಜ್ಜೆ ಹಾಕತೊಡಗಿದಳು. ದಾರಿಯ ಪಕ್ಕದಲ್ಲಿ ಹುಟ್ಟಿದ್ದ ತೇರು ಹೂವಿನ ಗಿಡದಲ್ಲಿ ಕೆಂಪು ಕೆಂಪು ಹೂಗೊಂಚಲು ಬಿಟ್ಟಿತ್ತು. ಎರಡು ಮೂರು ಚಿಟ್ಟೆಗಳು ಹಾರುತ್ತ ಹೂವಿಂದ ಹೂವಿಗೆ ಬಣ್ಣದ ಗೆರೆಯನ್ನು ಮೂಡಿಸುತ್ತಿರುವ ಹಾಗೆ ಪುಟ್ಟಿಗೆ ಕಂಡಿತು. ಅವಳು ಚಿಟ್ಟೆಗಳನ್ನು ನೋಡುತ್ತಾ ದಾರಿಯ ಬದಿಗೆ ಸರಿದು ನಿಂತಳು. ಈ ಚಿಟ್ಟೆಗಳ ಬಣ್ಣ ಎಷ್ಟು ಚೆಂದ. ನಿಧಾನವಾಗಿ ರೆಕ್ಕೆ ಬಿಚ್ಚಿ ಮಡಚಿ ಮಾಡುತ್ತಾ ಕುಳಿತಿರುವಾಗ ನೋಡುತ್ತಲೇ ಇರಬೇಕೆನಿಸುತ್ತದೆ ಅಂದುಕೊಂಡಳು. ಅಷ್ಟರಲ್ಲಿ ಕಾಲು ಬುಡದಲ್ಲಿ ಏನೋ ಸರಿದಂತೆ ಕಂಡಿತು. ಪುಟ್ಟ ಹಾವಿನ ಮರಿಯೊಂದು ಹುಲ್ಲಿನ ಸಂದಿನಲ್ಲಿ ನುಸುಳಿ ಮುಂದೆ ಹೋಯಿತು. ಪುಟ್ಟಿಗೆ ಭಯವಾಗಲಿಲ್ಲ. ಅವಳು ಆಗಾಗ ಅವನ್ನೆಲ್ಲಾ ನೋಡುತ್ತಿರುತ್ತಾಳೆ. ಆಗಲೇ ಅವಳಿಗೆ ದಾರಿಯ ಅಂಚಿನಲ್ಲಿ ಒಂದು ಇಪ್ಪತ್ತು ರೂಪಾಯಿಯ ನೋಟು ಬಿದ್ದಿರುವುದು ಕಂಡಿತು. ತಾನು ತಂದ ನೋಟೇ ಕೆಳಗೆ ಬಿತ್ತು ಎಂದು ಯೋಚಿಸಿ ಕೈ ಬಿಚ್ಚಿ ನೋಡಿದರೆ ಅದು ಕೈಯಲ್ಲಿಯೇ ಇತ್ತು. ಹೌದು, ಇದು ಮತ್ತೊಂದು ನೋಟು. ನನಗೆ ಸಿಕ್ಕಿದೆ ಎಂದು ಎತ್ತಿಕೊಂಡಳು. ಸುತ್ತಲೂ ನೋಡಿದಳು. ಯಾರೂ ಕಾಣಲಿಲ್ಲ. ನಾನು ಎರಡು ಬಾರ್ ಚಾಕಲೇಟ್ ತೆಗೆದುಕೊಳ್ಳುತ್ತೇನೆ. ಒಂದನ್ನು ಅಣ್ಣನಿಗಾಗಿ ಇಡುತ್ತೇನೆ. ಎಂದೆಲ್ಲ ಯೋಚಿಸಿ ಪಟಪಟ ಹೆಜ್ಜೆ ಹಾಕಲು ತೊಡಗಿದಳು. ಅವಳ ಖುಷಿಯ ನಡಿಗೆಯಲ್ಲಿ ಈಗ ಅವಳಿಗೆ ಬೇರೇನೂ ಕಾಣುತ್ತಿಲ್ಲ. ಚಾಕಲೇಟ್ ಮಾತ್ರ ತಲೆಯಲ್ಲಿ ತುಂಬಿಕೊಂಡಿತ್ತು.

'ಪುಟ್ಟಿ ಪುಟ್ಟಿ' ಎಂದು ಯಾರೋ ಕರೆದಂತಾಗಿ ನಿಂತಳು. ಪಕ್ಕದಲ್ಲಿ ಅಜ್ಜಿ ಒಬ್ಬಳು ನಿಂತಿದ್ದಾಳೆ... ಅವಳು ಬೇರಾರೂ ಅಲ್ಲ. ಆಚೆ ಕೇರಿಯಲ್ಲಿ ಅವಳ ಮನೆ ಇದೆ. ಮನೆಯಲ್ಲಿ ಮತ್ತಾರೂ ಇಲ್ಲ. ಮನೆಯೆಂದರೆ ಒಂದು ಪುಟ್ಟ ಜೋಪಡಿ ಅಷ್ಟೇ. 'ಪುಟ್ಟಿ, ನನ್ನ ನೋಟ್ ಒಂದು ಕಳೆದು ಹೋಯಿತು. ಔಷಧಿ ತರಲು ಹೊರಟಿದ್ದೆ. ನೀನೇನಾದರೂ ಕಂಡೆಯಾ? ಗುಳಿಗೆ ಖರ್ಚಾಗಿಬಿಟ್ಟಿದೆ. ಸ್ವಲ್ಪ ಹುಡುಕಲು ಬರುತ್ತೀಯಾ, ನನ್ನ ಕಣ್ಣಿಗೆ ಕಾಣುವುದಿಲ್ಲ' ಎಂದು ಹೇಳುತ್ತಾ ಪುಟ್ಟಿಯನ್ನೇ ನೋಡುತ್ತ ನಿಂತುಬಿಟ್ಟಳು. ಓಹೋ ನನಗೆ ಸಿಕ್ಕಿದ್ದು ಅಜ್ಜಿಯದೇ ನೋಟು ಎಂದು ಪುಟ್ಟಿಗೆ ತಿಳಿಯಿತು. ಪಾಪ ಅಜ್ಜಿಯ ಹಣ ನನಗೆ ಸಿಕ್ಕಿದ್ದು ಒಳ್ಳೆಯದೇ ಆಯಿತು ಎಂದುಕೊಳ್ಳುತ್ತಾ, 'ನನಗೆ ದಾರಿಯಲ್ಲಿ ಈ ನೋಟು ಸಿಕ್ಕಿತು' ಎಂದು ಪುಟ್ಟಿ ನೋಟನ್ನು ಅಜ್ಜಿಗೆ ಕೊಟ್ಟಳು. ಅಜ್ಜಿ ಬಾಯಿ ಇಷ್ಟಗಲ ಮಾಡಿ ಪುಟ್ಟಿಯನ್ನು ತಬ್ಬಿ ಮುತ್ತು ಕೊಟ್ಟಳು. ಎಲ್ಲಿಗೆ ಹೋಗ್ತೀಯಾ ಎಂದು ಕೇಳಿದಳು. 'ನಾನು ತಿಂಡಿ ತರಲು ಅಂಗಡಿಗೆ ಹೋಗ್ತಾ ಇದ್ದೀನಿ' ಎಂದು ಹೆಜ್ಜೆ ಹಾಕ ತೊಡಗಿದಳು. 'ನಿನಗೆ ಹಣ ಸಿಕ್ಕಿದ್ದು ಒಳ್ಳೆಯದಾಯಿತು. ನನಗೆ ಗುಳಿಗೆ ತೆಗೆದುಕೊಳ್ಳದೇ ಇದ್ದರೆ ತಲೆ ಸುತ್ತಿ ಬರುತ್ತದೆ. ಹಾಗಾಗಿ ಮೊದಲು ಗುಳಿಗೆ. ಇದಕ್ಕೆ ಎರಡು ಗುಳಿಗೆ ಸಿಗುತ್ತದೆ. ಊಟ ಇಲ್ಲದೇ ಇಡೀ ದಿನ ಬೇಕಾದರೂ ಇರುತ್ತೇನೆ. ಆದರೆ, ಗುಳಿಗೆ ಮಾತ್ರ ಬೇಕೇ ಬೇಕು' ಎಂದು ಪುಟ್ಟಿಯ ಕಡೆ ನೋಡುತ್ತಾ ಕಣ್ಣು ಒರೆಸಿಕೊಂಡಳು.

ನಾನು ನಿನ್ನ ಜೊತೆ ಬರುತ್ತೇನೆ. ಮೊದಲು ನಿನ್ನ ಔಷಧಿ ತೆಗೆದುಕೊಳ್ಳೋಣ ಎಂದು ಪುಟ್ಟಿ ಅಜ್ಜಿಯ ಕೈ ಹಿಡಿದುಕೊಂಡಳು. ಅವರಿಬ್ಬರೂ ಔಷಧಿಯ ಅಂಗಡಿಗೆ ಬಂದರು. ಅಜ್ಜಿ ಗುಳಿಗೆಯ ಖಾಲಿ ಕಾಗದ ಮತ್ತು ಇಪ್ಪತ್ತು ರೂಪಾಯಿ ಕೊಡುತ್ತಾ 'ಗುಳಿಗೆ ಕೊಡಿ' ಎಂದಳು. ಅಂಗಡಿಯವ ಇಪ್ಪತ್ತು ರೂಪಾಯಿ

